ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರ ವಕೀಲರಿಂದಃ-

ನಾನು ಈಗ ಹಾಜರುಪಡಿಸಿದ ಪ್ರಮಾಣ ಪತ್ರವನ್ನು ನನ್ನ ಮುಖ್ಯ ವಿಚಾರಣೆಯನ್ನಾಗಿ ಪರಿಗಣಿಸಲು ಕೋರುತ್ತೇನೆ. ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಶಗಳು ಸತ್ಯವಾಗಿವೆ ಮತ್ತು ಅದರಲ್ಲಿ ನನ್ನ ಸಹಿ ಇರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

2 ಒಳರೋಗಿ ಕಡತವನ್ನು ನಿಪಿ-13 ಮತ್ತು ನಿಪಿ-14 ಎಂದು, 5 ಎಕ್ಸರೇಗಳನ್ನು ನಿಪಿ-15 ರಿಂದ ನಿಪಿ-19 ಎಂದು ಗುರುತಿಸಲಾಯಿತು.

ಪಾಟೀ ಸವಾಲು 2ನೇ ಎದುರುದಾರರ ಪರ ವಕೀಲರಿಂದಃ-

ಅರ್ಜಿದಾರರು ದಿನಾಂಕ 12.06.2022ರಂದು ನಮ್ಮ ಆಸ್ಪತ್ರೆಗೆ ಬಂದಿರುತ್ತಾರೆ. ಆಗ ನಾವು ಎಂ.ಎಲ್.ಸಿ ಮಾಡಿರುತ್ತೇವೆ. ಎಂ.ಎಲ್.ಸಿ ಎಕ್ಸಟ್ರಾಕ್ಟನ್ನು ಹಾಜರುಪಡಿಸಿರುವುದಿಲ್ಲ ಆದರೆ ಗಾಯದ ಪ್ರಮಾಣ ಪತ್ರದ ಜೆರಾಕ್ಸ್ ಪ್ರತಿಯನ್ನು ಸಲ್ಲಿಸಿರುತ್ತೇನೆ. ಗಾಯಾಳುವಿಗೆ ನಾನು ಶಸ್ತ್ರ ಚಿಕಿತ್ಸೆ ಮಾಡಲು ಶಿಫಾರಸ್ಸು ಮಾಡಿರುತ್ತೇನೆ. ದಿನಾಂಕ 14.06.2022ರಂದು ಶಸ್ತ್ರ ಚಿಕಿತ್ಸೆ ಮಾಡಲಾಗಿರುತ್ತದೆ. ಅರ್ಜಿದಾರರು ನಮ್ಮ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಆಗಾಗ್ಗ ಚಿಕಿತ್ಸೆಗೆ ಬರುತ್ತಿರುತ್ತಾರೆ. ಮುಂದುವರೆದ ಚಿಕಿತ್ಸೆ ಬರುತ್ತಿರುವ ಬಗ್ಗೆ ದಾಖಲೆಗಳನ್ನು ನಾನು ಹಾಜರುಪಡಿಸಿಲ್ಲ. ದಿನಾಂಕ 23.08.2022ಕ್ಕೂ ಮುಂಚೆ ಮುಂದುವರೆದ ಶಸ್ತ್ರ ಚಿಕಿತ್ಸೆ ಅಗತ್ಯ ಇದೆ ಎಂದು ನಾನು ಅಡ್ವೈಸ್ ಮಾಡಿರುತ್ತೇನೆ. ಬರವಣಿಗೆ ನಿರ್ದೇಶನ ನೀಡಿರುವ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ.

ಅರ್ಜಿದಾರರಿಗೆ ಶಸ್ತ್ರ ಚಿಕಿತ್ಸೆ ಮಾಡಿದ್ದೇನೆ ಆದರೆ ಇಂಪ್ಲಾಂಟ್ ಅಳವಡಿಸಲಾಗಿದೆ ರಾಡ್ ತೆಗೆದಿಲ್ಲ ಆದರೆ ಒಂದು ಸ್ಕ್ರೂ ತೆಗೆಯಲಾಗಿದೆ. ದಿನಾಂಕ 03.06.2025ರಲ್ಲಿ ಡಿಸೆಬಿಲಿಟಿ ಅಸೆಸ್ಮೆಂಟ್ ಪಡೆಯಲು ಅರ್ಜಿದಾರರು ನಮ್ಮ ಬಳಿ ಬಂದಿದ್ದರು. ಅರ್ಜಿದಾರರು ನನ್ನ ಬಳಿ ಮುಂದುವರೆದ ಚಿಕಿತ್ಸೆ ಬಂದಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 03.06.2025ಕ್ಕೂ ಮುಂಚೆ ಚಿಕಿತ್ಸೆ ಬದಿರುವ ಬಂದಿರುವ ಬಗ್ಗೆ ದಾಖಲೆಗಳು ಅರ್ಜಿದಾರರಬಳಿ ಇರುತ್ತದೆ. ಸದರಿ ಗಾಯಾಳು ಗುಣವಾಗಿದೆ ಆದರೆ ನ್ಯೂನ್ಯತೆ ಇದೆ. ಅವರಿಗೆ ಮಂಡಿ ಮಡಿಚಲು ಆಗುವುದಿಲ್ಲ ಮತ್ತು ದೈನಂದಿನ ಕೆಲಸ ಮಾಡಿಕೊಳ್ಳಲು ಆಗುವುದಿಲ್ಲ. ಗಾಯಾಳು ಕೂಲಿ ಕೆಲಸ ಮಾಡುತ್ತಿದ್ದಾರೆ ಎಂದು ಹೇಳಿರುತ್ತಾರೆ. ಆತ ಪಿಲೇಚೇರಿ ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆತ ಕುರ್ಚಿ ಮೇಲೆ ಕುಳಿತು ಕೆಲಸ ಮಾಡಲು ತೊಂದರೆ ಇಲ್ಲ ಎಂದರೆ ಸರಿ.

ನಮ್ಮ ಆಸ್ಪತ್ರೆಯಲ್ಲಿ ಔಷದಿಯನ್ನು ನೀಡಲಾಗಿದೆ ಎಂದರೆ ಸರಿ. ಸಾಕ್ಷಿಗೆ ನಿಪಿ-89 ರಿಂದ ನಿಪಿ-99 ಬಿಲ್ ಗಳನ್ನು ತೋರಿಸಿದಾಗ ಇವು ನಮ್ಮ ಅಸ್ಪತ್ರೆಗೆ ಸಂಬಂಧಿಸಿದ ಬಿಲ್ ಗಳು ಅಲ್ಲ ಎಂದು ನುಡಿಯುತ್ತಾರೆ. ನಾನು ಬೇರೆ ಆಸ್ಪತ್ರೆಗೆ ರೆಫರ್ ಮಾಡಿಲ್ಲ. ಯಾವುದಾದರೂ ಮನುಷ್ಯನಿಗೆ ಉಸಿರಾಟದ ತೊಂದರೆ ಇದ್ದರೆ ಲೆವಿಪಿಲ್ ಮಾತ್ರೆ ಕೊಡುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಅಂತಹ ಮನುಷ್ಯ 2-3 ಮಾತ್ರೆಗಳನ್ನು ತೆಗೆದುಕೊಳ್ಳಬಹುದು. ಈ ಮಾತ್ರೆಯು ಮೂಳೆ ರೋಗಕ್ಕೆ ಸಂಬಂಧಪಟ್ಟಿದ್ದಲ್ಲ. ಇಕೋಸ್ಪಿನ್ ಮಾತ್ರೆಯೂ ಸಹ ಮೂಳೆ ರೋಗಕ್ಕೆ ಸಂಬಂಧಿಸಿದ್ದಲ್ಲ ಎಂದರೆ ಸರಿ. ಗಾಯಾಳುವಿಗೆ ಬಿ ಪ್ರೋಟಿನ್ ತೆಗೆದುಕೊಳ್ಳಲು ಹೇಳಿರುತ್ತೇನೆ. ನನ್ನ ನೋಟ್ಸ್ ನಲ್ಲಿ ಬಿ ಪ್ರೋಟಿನ್ ಎಷ್ಟು ದಿನಗಳ ಕಾಲ ತೆಗೆದುಕೊಳ್ಳಬೇಕು ಎಂದು

ನಮೂದು ಮಾಡಿರುತ್ತೇನೆ. ನಮ್ಮ ಸಲಹಾ ಚೀಟಿಗಳನ್ನು ನಮ್ಮ ಆಸ್ಪತ್ರೆಯ ಫಿಜಿಷಿಯನ್ ತೆಗೆದುಕೊಳ್ಳಬೇಕು ಎಂದು ಬರೆದಿರುತ್ತಾರೆ. ದಿನಾಂಕ 16.11.2023ರಂದು ಫಿಜಿಷಿಯನ್ ಬರೆದಿರುತ್ತಾರೆ. ಇಂಪ್ಲಾಂಟ್ ತೆಗೆಯದೇ ಇರುವುದರಿಂದ ಚಲನ ವಲನಕ್ಕೆ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿ ಸಾಮಾನ್ಯವಾಗಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಮೂದುಮಾಡುವಷ್ಟು ಸ್ಟೆಬಿಲಿಟಿ ಮತ್ತು ಮೊಬಿಲಿಟಿ ಕಂಪೌಂಡ್ ಬರುವುದಿಲ್ಲ ಎಂದರೆ ಸರಿಯಲ್ಲ. ಇಂಪ್ಲಾಂಟ್ ತೆಗೆದರೂ ಸಹ ಅದು ಕಡಿಮೆಯಾಗುವುದಿಲ್ಲ. ಡಿಸೆಬಿಲಿಟಿ ಅಂಶವನ್ನು ನಾನು ಗೈಡ್ ಲೈನ್ ಪ್ರಕಾರ ಲೆಕ್ಕ ಮಾಡಿರುತ್ತೇನೆ. ಗೈಡ್ ಲೈನ್ ಪ್ರಕಾರ ಫಿಜಿಕಲೀ, ರೇಡಿಯಾಲಜಿಕಲಿ ಮಾಡಬೇಕು ಎಂದರೆ ಸರಿ. ನಾನು ಹೋಲ್ ಬಾಡಿಗೆ ಲಕ್ಕೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪರ್ಟಿಕ್ಯೂಲ್ ಲಿಂಬ್ ಹೈಯರ್ ಸೈಡ್ ಡಿಸೆಬಲಿಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಹೋಲ್ ಬಾಡಿಗೆ 1/3 ತೆಗೆದುಕೊಳ್ಳಬೇಕು ಎಂದರೆ ಸರಿ. ಅರ್ಜಿದಾರರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ನಿವೇದಿತ ಟಿ.ಎಂ.)
ರಾಮನಗರದ ಮೋಟಾರು ವಾಹನಗಳ ಅಪಘಾತದ
ಪರಿಹಾರಗಳ ಹೆಚ್ಚುವರಿ ನ್ಯಾಯಾ ಮಂಡಳಿಯ
ಪೀಠಾಧಿಕಾರಿಗಳು